

ಪಂಡಿತ್ ತಾರಾನಾಥರು, ಅವರ ಶಿಷ್ಯರ ಮಗ ಭಾನುದತ್ತ ಮತ್ತು ಬಾಲಕ ರಾಜೀವ


# ಭಾಗ 1

ಸಂಗೀತದ ಜೊತೆಯಲ್ಲಿ, ಸಂಗೀತದ ನಡುವೆಯೇ ಬೆಳೆದು ಅದನ್ನೇ ಉಸಿರಾಗಿಸಿಕೊಂಡ ರಾಜೀವ ತಾರಾನಾಥರು ಈ ಭಾಗದಲ್ಲಿ ತಮ್ಮ ವಿಶಿಷ್ಟವಾದ ಶೈಲಿ ಹಾಗೂ ಭಾಷೆಯಲ್ಲಿ ತಮ್ಮ ಬದುಕನ್ನು ಮಾತನಾಡಿದ್ದಾರೆ.

# ಔತ್ತಮ್ಯದ ದಾರಿ ಹುಡುಕುತ್ತಾ.....

ನನ್ನ ತಂದೆ ಪಂಡಿತ ತಾರಾನಾಥರು ಒಂದು ರೀತಿ ಲಿಯೊನಾರ್ಡೋ ದ ವಿನ್ಸಿ ಇದ್ದ ಹಾಗೆ– ಅವರು ತಬಲವಾದಕರು, ಗಾಯಕರು, ಒಬ್ಬ ಸ್ವಾತಂತ್ರ್ಯಯೋಧರು, ಸಮಾಜಸುಧಾರಕರು, ಅಲೋಪತಿ, ಆಯುರ್ವೇದ ಹಾಗೂ ಯುನಾನಿ ವೈದ್ಯರು ಎಲ್ಲವೂ ಆಗಿದ್ದರು. ಬಹುಶಃ ತಮ್ಮ ಸಾವಿನ ಬಗ್ಗೆ ಅವರಿಗೆ ಹತ್ತು ವರ್ಷ ಮೊದಲೇ ಗೊತ್ತಿತ್ತು ಅನ್ನಿಸುತ್ತೆ. ಹಾಗಾಗಿ ತಾವು ಸಾಯುವುದರೊಳಗೆ ತಮಗೆ ತಿಳಿದಿರುವ ಎಲ್ಲಾ ವಿದ್ಯೆಗಳನ್ನೂ ನನಗೆ ಕಲಿಸಬೇಕೆನ್ನುವ ತವಕ ಅವರಿಗೆ. ಅವರಿಗೆ ಅದೊಂದು ಟೈಂಬೌಂಡ್ ಕಾರ್ಯಕ್ರಮವಾಗಿತ್ತು. ನಾನು ಬೆಳಗ್ಗೆ ಕಣ್ಣು ಬಿಡುವಾಗಿನಿಂದಲೇ ನನ್ನ ಪಾಠ ಪ್ರಾರಂಭವಾಗುತ್ತಿತ್ತು. ಅವರು ಹೇಳಿಕೊಡುವುದೆಲ್ಲವನ್ನೂ ನಾನು ಹೇಳಬೇಕಿತ್ತು. ಕೆಲವೊಮ್ಮೆ ನನಗೆ "ಪುಟ್ಟ, ಇದನ್ನು ನಾನು ಒಂದು ಸಲ ಹೇಳುತ್ತೇನೆ. ನೀನು ತಕ್ಷಣವೇ ನೆನಪಿಟ್ಟುಕೊಂಡು ಹೇಳಬೇಕು, ಇಲ್ಲದಿದ್ದರೆ ನೀನು ನನ್ನ ಮಗನೇ ಅಲ್ಲ" ಎನ್ನುತ್ತಿದ್ದರು. ಹೀಗೆ ಕೆಲವೊಮ್ಮೆ ತುಂಬ ಒತ್ತಡ ಇರುತ್ತಿತ್ತು. ಲಾಲ್‌ಬಾಗಿಗೆ ಹೋದಾಗ ಪ್ರತಿ ಹೂ ಗಿಡಗಳ ಬಗ್ಗೆ ಅವರು ನೀಡುತ್ತಿದ್ದ ವಿವರಗಳನ್ನು ನೆನೆದರೆ ಈಗ ಆಶ್ಚರ್ಯವಾಗುತ್ತದೆ.


ನಾನು ತುಂಬಾ ಚಿಕ್ಕವನಿದ್ದಾಗಿನಿಂದಾಗಲೇ ನನಗೆ ಸಂಗೀತದ ಗೀಳು ಅಂಟಿಕೊಂಡಿತ್ತು. ಆವಾಗಲೇ ನಾನು ಸಂಗೀತ, ಓದು ಇವುಗಳಲ್ಲಿ ಮುಳುಗಿದ್ದೆ. ನಾನು ಹುಟ್ಟುವ ಮೊದಲೇ ಅಪ್ಪ ನನಗಾಗುವಂತಹ ಪುಸ್ತಕಗಳನ್ನು ಕೊಂಡಿಟ್ಟಿದ್ದರು. ಅವರಿಗೆ ಆಯುರ್ವೇದದಲ್ಲಿ ತುಂಬಾ ಆಸಕ್ತಿ. ತಬಲಾ ಚೆನ್ನಾಗಿ ಅಭ್ಯಾಸ ಮಾಡಿದರೆ ಬೆರಳುಗಳ ಸಂವೇದನೆ ಸೂಕ್ಷ್ಮವಾಗಿ, ನಾಡಿಪರೀಕ್ಷೆಗೆ ಅನುಕೂಲವಾಗುತ್ತದೆ ಎಂದು ಹಕೀಮ್ ಹರಗೋವಿಂದಜೀ ಅವರಿಗೆ ತಿಳಿಸಿದ್ದರಂತೆ. ಹರಗೋವಿಂದ್‌ಜೀ ಹೈದರಾಬಾದಿನ ನಿಜಾಮನ ಬಳಿ ಇದ್ದವರು. ಆ ಕಾಲದಲ್ಲಿ ಎಲ್ಲರೂ ಅವರನ್ನು ಪವಾಡಪುರುಷ ಎಂದೇ ಭಾವಿಸಿಕೊಂಡಿದ್ದರು. ಆಯುರ್ವೇದಕ್ಕೂ ತಬಲಾವಾದನಕ್ಕೂ ಒಂದು ವಿಚಿತ್ರ ಸಂಬಂಧ ಇದೆ. ತಬಲಾ ನುಡಿಸುವಾಗ ನಿಮ್ಮ ಬೆರಳುಗಳಿಗೆ ಲಯದ ತೀರಾ ಸೂಕ್ಷ್ಮವಾದ ಸಂವೇದನೆಯನ್ನು




ನಾನು ಎರಡೂವರೆ ವರ್ಷದವನಿದ್ದಾಗಲೇ
ಗ್ರಾಮಾಫೋನ್ ರಿಕಾರ್ಡ್‌ಗಳನ್ನು ಕೇಳುತ್ತಿದ್ದೆ.

ಅರಿಯಲು ಸಾಧ್ಯವಾಗುತ್ತದೆ. ಆ ಸಂವೇದನೆಯಿಂದ ನಾಡಿಮಿಡಿತದಲ್ಲಿನ ಸೂಕ್ಷ್ಮ ಬದಲಾವಣೆಗಳ ಜಾಡು ಹಿಡಿದು ವಿವಿಧ ರೋಗಗಳನ್ನು ಪತ್ತೆ ಹಚ್ಚಬಹುದು ಎನ್ನುವ ನಂಬಿಕೆ ಇತ್ತು. ಆ ನಂಬಿಕೆಯಿಂದಲೇ ಹಕೀಮರು ನಮ್ಮ ತಂದೆಯನ್ನು ವರ್ಷಗಟ್ಟಲೆ ತಬಲಾ ಕಲಿಯಲು ಹಚ್ಚಿದ್ದರು. ನಮ್ಮ ತಂದೆಗೂ ನಾನು ಸಂಗೀತದ ಮೂಲಕ ಆಯುರ್ವೇದದಲ್ಲಿ ಪರಿಣತಿ ಸಾಧಿಸಬೇಕೆಂಬ ಇಚ್ಛೆ ಇತ್ತು. ಹಾಗಾಗಿ ನನಗೆ ಮೂರನೇ ವಯಸ್ಸಿನಿಂದಲೇ ಅವರು ತಬಲ ಕಲಿಸಲಾರಂಭಿಸಿದರು. ನಮ್ಮಪ್ಪನಿಗೆ ಸೊಗಸಾದ ಶಾರೀರವಿತ್ತು. ಜೋಗುಳದ ಹಾಡುಗಳನ್ನು ನನಗಾಗಿ ರಚಿಸಿ ಹಾಡುತ್ತಿದ್ದರು. ಅವರು ಮಗ್ಗಿಗಳನ್ನು ರಾಗ ಹಾಕಿ ಕಲಿಸುತ್ತಿದ್ದರು ಎಂದು ಅವರ ಬಳಿ ಪಾಠ ಕಲಿತ ಹಲವು ಹಿರಿಯರು ನನಗೆ ತಿಳಿಸಿದರು.

ನಾನು ಎರಡೂವರೆ ವರ್ಷದವನಿದ್ದಾಗಲೇ ಗ್ರ್ಯಾಮಾಫೋನ್ ರೆಕಾರ್ಡ್‌ಗಳನ್ನು ಕೇಳುತ್ತಿದ್ದೆ. ಗ್ರ್ಯಾಮಾಫೋನ್ ಹೇಗೆ ಬಳಸಬೇಕೆಂದು ಆವಾಗಲೇ ನಮ್ಮಪ್ಪ ನನಗೆ ಕಲಿಸಿದ್ದರು. ಮಹಾನ್ ಹಿಂದೂಸ್ತಾನಿ ಸಂಗೀತಗಾರರ 50-60 ಗ್ರ್ಯಾಮಾಫೋನ್ ತಟ್ಟೆಗಳನ್ನು ನಮ್ಮ ತಂದೆ ಸಂಗ್ರಹಿಸಿಟ್ಟಿದ್ದರು. ಆಗ ನನಗಿನ್ನೂ ಓದಲು ಬರುತ್ತಿರಲಿಲ್ಲ, ಆದರೆ ರೆಕಾರ್ಡ್‌ಗಳ ಮೇಲಿದ್ದ ಗುರುತುಗಳಿಂದಾಗಿ ಅವೆಲ್ಲವೂ ನನಗೆ ಪರಿಚಿತವಾಗಿದ್ದವು. ಹಾಗಾಗಿ ಅವರು ಯಾವ ರೆಕಾರ್ಡ್ ಕೇಳಿದರೆ ಅದನ್ನು ನಾನು ತಂದುಕೊಡುತ್ತಿದ್ದೆ. ಅದರಲ್ಲಿ ಉಸ್ತಾದ್ ಅಬ್ದುಲ್ ಕರೀಂಖಾನ್, ಝೋಹರಾಬಾಯಿ ಅಂಬಾಲ,




▲ ನಮ್ಮ ತಂದೆಗೆ ನಾನು ಸಂಗೀತದ ಮೂಲಕ ಆಯುರ್ವೇದದಲ್ಲಿ ಪರಿಣತಿ ಸಾಧಿಸಬೇಕೆಂಬ ಇಚ್ಛೆ ಇತ್ತು. ಹಾಗಾಗಿ ನನಗೆ ಮೂರನೇ ವಯಸ್ಸಿನಿಂದಲೇ ಅವರು ತಬಲ ಕಲಿಸಲಾರಂಭಿಸಿದರು.



▲ ಬಹುಶಃ ತಮ್ಮ ಸಾವಿನ ಬಗ್ಗೆ ಅವರಿಗೆ ಹತ್ತು ವರ್ಷ ಮೊದಲೇ ತಿಳಿದಿತ್ತೇನೋ, ಹಾಗಾಗಿ ತಾವು ಸಾಯುವುದರೊಳಗೆ ತಮಗೆ ತಿಳಿದ ಎಲ್ಲಾ ವಿದ್ಯೆಗಳನ್ನೂ ನನಗೆ ಕಲಿಸಬೇಕೆಂಬ ತವಕ ಅವರಿಗೆ.

▼ ತಾಯಿ ಸುಮತೀಬಾಯಿ ರಾಜೀವ ಮತ್ತು ರಣಬೀರರೊಂದಿಗೆ





ಉಸ್ತಾದ್ ಫೈಯ್ಯಾಜ್‌ಖಾನ್, ಉಸ್ತಾದ್ ಮೆಹಬೂಬ್‌ರಜ಼ಾನ್ ಸೋಲಾಪುರ್‌ವಾಲೆ, ಪಂಡಿತ್ ಪ್ಯಾರೇಲಾಲ್ ಮುಂತಾದವರ ರೆಕಾರ್ಡುಗಳಿದ್ದವು. ಇವುಗಳನ್ನು ಕೇಳಿಕೊಂಡೇ ನಾನು ಬೆಳೆದೆ. ಅವುಗಳಲ್ಲಿ ಹಲವು ನನ್ನ ಮನಸ್ಸಿನಲ್ಲಿ ಹಾಗೇ ಉಳಿದುಬಿಟ್ಟಿವೆ. ಉಸ್ತಾದ್ ಅಬ್ದುಲ್ ಕರೀಂಖಾನ್ ಅವರ ರೆಕಾರ್ಡುಗಳು ನನಗೆ ತುಂಬಾ ಇಷ್ಟ. ಭೈರವಿ ರಾಗದ "ಯಮುನಾ ಕೇ ತೀರ್" ಝುಂಝೂಟಿ ರಾಗದ "ಪಿಯಾ ಬಿನ್ ನಹಿ ಆವತ್ ಚೈನ್" ಮೊದಲಾದ ಹಾಡುಗಳು ನನಗೆ ತುಂಬಾ ಇಷ್ಟವಾಗಿದ್ದವು. ನನಗೆ ಐದು ವರ್ಷವಾಗಿದ್ದಾಗ ಅಬ್ದುಲ್ ಕರೀಂಖಾನರ ಧ್ವನಿಮುದ್ರಿಕೆಯೊಂದನ್ನು ನನ್ನ ತಂದೆ ತರಿಸಿದ್ದರು. ಅದು ಅಂಚೆ ಮೂಲಕ ಬರುವಾಗಲೇ ಸ್ವಲ್ಪ ಮುರಿದಿತ್ತು. ನಮ್ಮ ತಂದೆ ಅದಕ್ಕೆ ಒಂದು ಟೇಪನ್ನು ಹಚ್ಚಿ ಸರಿಮಾಡಿದ್ದರು. ಆದರೆ ಅದು ಮನೆಗೆ ಬಂದ ಮರುದಿನ ಕರೀಂಖಾನರ ನಿಧನದ ವಾರ್ತೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ನನ್ನ ತಂದೆಯವರ ಬಳಿ ಒಂದೆರಡು ಸರೋದ್ ಮುದ್ರಿಕೆಗಳೂ ಇದ್ದವು. ಅವು ನನಗೆ ಅಷ್ಟೇನೂ ಇಷ್ಟವಾಗಿರಲಿಲ್ಲ. ಅದರ ಸ್ಟಕಾಟೋನಾದ ನನಗೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಆ ರೆಕಾರ್ಡುಗಳನ್ನು ಹಾಕಿದರೆ ನಾನು ಗದ್ದಲ ಮಾಡಿಬಿಡುತ್ತಿದ್ದೆ. ಅವುಗಳನ್ನು ತೆಗೆಯುವವರೆಗೂ ಬಿಡುತ್ತಿರಲಿಲ್ಲ ಅಥವಾ


▲


ತಾಯಿ ಸುಮತೀಬಾಯಿ ರ
ಮತ್ತು ರಣಬೀರರೊಂದಿಗೆ

ಬೆಂಗಳೂರು ಸ
ಕಾಲೇ
ಪ್ರೊ. ಎನ್ ರಾಮರಾ
ಅಕ್ಕಪಕ್ಕದಲ್ಲಿ ಚ
ಭುಜಂಗಸ್ವಾಮಿ
ಈಶ್ವರವ

ಅಲ್ಲಿಂದ ಓಡಿಬಿಡುತ್ತಿದ್ದೆ. ಉಸ್ತಾದ್ ಅಲ್ಲಾವುದ್ದೀನ್‌ಖಾನ್ ಅವರ ಹೆಸರು ಕೇಳಿದ್ದೆ. ಆದರೆ ಅವರ ಸರೋದ್‌ವಾದನ ಕೇಳಿರಲಿಲ್ಲ. ಒಟ್ಟಾರೆ ನನಗೆ ಸರೋದ್ ಬಗ್ಗೆ ಯಾವ ರೀತಿಯ ಆಕರ್ಷಣೆಯಾಗಲೀ, ಗೌರವವಾಗಲೀ ಇರಲಿಲ್ಲ. ನಾನು ಹೆಚ್ಚು ಕಡಿಮೆ ಹಾಡುಗಾರಿಕೆಯಲ್ಲೇ ಇದ್ದೆ. ಅದು ಬಿಟ್ಟರೆ ತಬಲಾ, ಸಿತಾರ್, ವಿಚಿತ್ರವೀಣೆ ಹೀಗೆ. ಆದರೆ ನನ್ನ ಜೀವನದ ಬಹುದೊಡ್ಡ ವ್ಯಂಗ್ಯವೆಂದರೆ, ನಾನು ಯಾವ ನಾದವನ್ನು ಕೇಳಿದರೆ ಸಾಕು ಓಡಿ ಹೋಗುತ್ತಿದ್ದೆನೋ, ಈಗ ಅದೇ ನಾದದ ಜೊತೆಗೇ ಬದುಕುತ್ತಿದ್ದೇನೆ!

ನಾನು ಚಿಕ್ಕವನಾಗಿದ್ದಾಗ ನನ್ನ ತಲೆ ದಪ್ಪ ಇತ್ತು. ಅದರಿಂದಲೋ ಏನೋ ಬೇರೆ ಮಕ್ಕಳ ರೀತಿ ನನಗೆ ಓಡೋದು, ಮರಕೋತಿ ಆಡೋದು ಇವೆಲ್ಲಾ ಕಷ್ಟ ಆಗುತ್ತಿತ್ತು. ಬಿದ್ದು ಬಿಡ್ತಾ ಇದ್ದೆ. ಅಪ್ಪ ಎತ್ತಿ, ಕೂರಿಸಿಕೊಂಡು "ಹಾಡೋ" ಎನ್ನುತ್ತಿದ್ದರು. ನಾನು ಹಾಡುತ್ತಿದ್ದೆ. ಇದರಿಂದಲೇ ಏನೋ ನಾನು ಸಂಗೀತಕ್ಕೆ ಆತುಕೊಂಡೆ. ನನ್ನ ವಯಸ್ಸಿನ ಮಕ್ಕಳಿಗಿಂತ ಸ್ವಲ್ಪ ಭಿನ್ನವಾಗಿಯೇ ಬೆಳೆದ ನಾನು ಆಗ ಒಂದು ರೀತಿ ಪ್ರದರ್ಶನದ ವಸ್ತು ಆಗಿಬಿಟ್ಟಿದ್ದೆ. ಯಾರಾದರೂ ಬಂದಾಗ 'ಹಾಡೋ' ಅಂತಿದ್ದರು. ನಾನು ಹಾಡ್ತಾ ಇರ್ತಿದ್ದೆ. ನನಗೆ ಸಂಗೀತದ ಶಿಕ್ಷಣ ಪ್ರಾರಂಭವಾಗಿದ್ದು ನನ್ನ ತಂದೆಯಿಂದ. ಅವರೇ ನನ್ನ ಮೊದಲ ಗುರು. "ಸ್ವರಶುದ್ಧತೆ, ರಾಗಭಾವ ಮತ್ತು ಸ್ವಾನುಭವ" ಇವು ಸಂಗೀತದಲ್ಲಿ ತುಂಬಾ ಮುಖ್ಯ ಎಂಬುದನ್ನು ನನಗವರು ಮನದಟ್ಟು ಮಾಡಿಸಿದ್ದರು. ಅವರು ಕಲಿಸಿದ ಭೈರವಿ ರಾಗವನ್ನು ಕೆಲವು ಪುಟ್ಟ ಪುಟ್ಟ ಚೀಝುಗಳ ಮೂಲಕ ಮನನ ಮಾಡಿಸಿದ್ದರು. ನಮ್ಮ ಮನೆಗೆ ಬರುತ್ತಿದ್ದ ಅನೇಕ ವಿದ್ವಾಂಸರು ಕೂಡ ನನಗೆ ಒಂದಿಷ್ಟು ಪಾಠ ಹೇಳಿಕೊಡುತ್ತಿದ್ದರು. ಪಂಡಿತ್ ಸವಣೂರು ಕೃಷ್ಣಾಚಾರ್ಯರು ನನಗೆ ಯಮನ್, ಭೂಪ್, ಮಾರ್ವಾ, ಅಸಾವರಿ, ಪೂರಿಯಾ ರಾಗಗಳನ್ನು ಹೇಳಿಕೊಡುವುದರ ಮೂಲಕ ಶಾಸ್ತ್ರೀಯ ಸಂಗೀತದ ಕ್ರಮಬದ್ಧ ಶಿಕ್ಷಣ ಪ್ರಾರಂಭಿಸಿದರು. ಪಂಡಿತ್ ಸವಾಯಿ ಗಂಧರ್ವ ಅವರ ಮೊದಲ ಶಿಷ್ಯ ವೆಂಕಟರಾವ್ ರಾಮದುರ್ಗಕರ್ ಅವರು ನಮ್ಮ ತಂದೆಯ ಬಳಿಗೆ





ತಿರುಚಿನಾಪಳ್ಳಿಯಲ್ಲಿ ಕಾಲುಮುರಿದುಕೊಂಡಿದ್ದಾಗ ಅಭ್ಯಾಸನಿರತ ರಾಜೀವ್

ಚಿಕಿತ್ಸೆಗೆಂದು ಬಂದಿದ್ದರು. ಸ್ವಲ್ಪ ದಿನ ನಮ್ಮ ಮನೆಯಲ್ಲೇ ಉಳಿದಿದ್ದರು. ಅವರೂ ನನಗೆ ಭೈರವಿ ರಾಗವನ್ನು ಕಲಿಸಿದರು. ಅವರಿಂದಾಗಿ ಕಿರಾನಾ ಘರಾನದ ಶೈಲಿ ನನ್ನ ಮೇಲೆ ಪ್ರಭಾವ ಬೀರಿತು. ಆಕಸ್ಮಿಕವಾಗಿ ಮನೆಗೆ ಬಂದ ಪಂಡಿತ್ ಪಂಚಾಕ್ಷರಿ ಗವಾಯಿಯವರು ನನಗೆ ತುಂಬಾ ಪ್ರೀತಿಯಿಂದ, ತಾಳ್ಮೆಯಿಂದ ಜೋಗಿಯಾ ಮತ್ತು ಮುಲ್ತಾನಿ ರಾಗಗಳನ್ನು ಕಲಿಸಿಕೊಟ್ಟರು. ಅದೊಂದು ಸುಯೋಗ. ಅದನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ.

ಚಿಕ್ಕವನಿದ್ದಾಗ ನಾನು ಹಾಡುತ್ತಿದ್ದುದನ್ನು ತುಂಬಾ ಜನ ಮೆಚ್ಚಿಕೊಳ್ಳುತ್ತಿದ್ದರು. ಆದರೆ ನಮ್ಮ ತಂದೆ ಯಾವುದನ್ನೂ ಅಷ್ಟು ಸಲೀಸಾಗಿ ಒಪ್ಪುತ್ತಿರಲಿಲ್ಲ. ಒಮ್ಮೆ ಬೆಂಗಳೂರಿನಲ್ಲಿ ಯಾವುದೋ ಒಂದು ಕಟ್ಟಡದ ಉದ್ಘಾಟನೆ. ನಮ್ಮ ತಂದೆ ತಾರಾನಾಥರು ಮುಖ್ಯ ಅತಿಥಿಗಳು. ನನಗೆ ಹಾಡಲು ಹೇಳಿದ್ದರು. ನಾನು ಬಾಗೇಶ್ರೀ ರಾಗವನ್ನು ನನಗೆ ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಿಸಿ ಹಾಡಿದೆ. ಎಲ್ಲರೂ ಮೆಚ್ಚಿಕೊಂಡರು. ಅಮ್ಮನಿಗೂ ಸಾಕಷ್ಟು ಖುಷಿಯಾಗಿತ್ತು. ಆದರೆ ನಮ್ಮಪ್ಪ ಮಾತ್ರ "ಬರುತ್ತೇ ಅಂತ ಸಿಕ್ಕಸಿಕ್ಕಲ್ಲಿ ತಾನ್‌ಗಳನ್ನು ಹೊಡೆದು ಮನಸ್ಸಿಗೆ ಬಂದಂತೆ ಗಮಕ ಹಾಡುವುದೇ?" ಎಂದು ದಾರಿಯುದ್ದಕ್ಕೂ ಬಯ್ಯುತ್ತಾ ಬಂದರು. ನನಗೆ ತುಂಬಾ ದುಃಖವಾಗಿತ್ತು. ಎಲ್ಲರೂ ಅಷ್ಟೊಂದು ಮೆಚ್ಚಿಕೊಂಡರೂ ಅಪ್ಪ ಮಾತ್ರ ಬೈಯುತ್ತಾನಲ್ಲ ಎಂದು ಅಳುವೇ ಬಂದಿತ್ತು. ನಮ್ಮಪ್ಪನ

ಕ್ರಮವೇ ಹಾಗೆ. ಹೀಗೆ ಸಂಗೀತದ ಅಭಿರುಚಿ ಮಾತ್ರವಲ್ಲ, ಬದುಕಿನಲ್ಲಿ ಕಷ್ಟಕಾರ್ಪಣ್ಯಗಳನ್ನು ಧೈರ್ಯವಾಗಿ ಎದುರಿಸುವುದನ್ನೂ ನನಗವರು ಸಣ್ಣವಯಸ್ಸಿನಲ್ಲೇ ಕಲಿಸಿದರು.

ಕಡೆಯ ದಿನಗಳಲ್ಲಿ ತಂದೆಯವರ ಆರೋಗ್ಯ ಅಷ್ಟು ಸರಿಯಿರಲಿಲ್ಲ. ಹಾಗಾಗಿ ಅವರಿಗೆ ಕಲಿಸುವುದಕ್ಕೆ ಆಗುತ್ತಿರಲಿಲ್ಲ. ನನಗೆ ಹೆಚ್ಚಿನದನ್ನು ಕಲಿಸಲು ಗ್ವಾಲಿಯರ್ ಘರಾನಾದ ಪಂಡಿತ್ ಶಂಕರರಾವ್ ಜೋಷಿ ದೇವಗಿರಿಯವರನ್ನು ಗೊತ್ತುಮಾಡಿದ್ದರು. ಜೋಷಿಯವರನ್ನು ಧಾರವಾಡದಿಂದ ಬೆಂಗಳೂರಿಗೆ ಬರಲು ಒತ್ತಾಯಮಾಡಿ ಒಪ್ಪಿಸಿದ್ದರು. ಮೊದಲ ಬಾರಿಗೆ ಅವರು ಧಾರವಾಡದಿಂದ ಬೆಂಗಳೂರಿಗೆ ಬಂದವರು ನೇರವಾಗಿ ನಮ್ಮ ಮನೆಗೆ ಬಂದರು. ಅಂದು ಅಕ್ಟೋಬರ್ 31, 1942. ಅವರು ಮನೆಗೆ ಬರುವ ಒಂದೆರಡು ಗಂಟೆಗಳ ಮೊದಲು ನಮ್ಮ ತಂದೆಯವರು ನಿಧನರಾಗಿದ್ದರು. ಮನೆ ಅಸ್ತವ್ಯಸ್ತವಾಗಿತ್ತು. "ಆಗಬಾರದ್ದು ಆಗಿ ಹೋಗಿದೆ. ಆಗಿರುವುದನ್ನು ಯಾರಿಂದಲೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಮಕ್ಕಳು ನಿಮ್ಮಿಂದ ಸಂಗೀತ ಕಲಿಯಬೇಕೆನ್ನುವುದು ತಾರಾನಾಥರ ಇಚ್ಛೆಯಾಗಿತ್ತು. ಅದರಂತೆಯೇ ನೀವು ಸಂಗೀತಪಾಠ ಮುಂದುವರೆಸಿ. ನೀವು ಊರಿಗೆ ಮರಳಿ ಹೋಗುವ ಅವಶ್ಯಕತೆಯಿಲ್ಲ" ಎಂದು ನಮ್ಮಮ್ಮ ಜೋಷಿಯವರಿಗೆ ಹೇಳಿದರು. ನಾನು ಹಾಗೂ ಡಿ.ಕೆ. ಭಾರದ್ವಾಜ್ ಅವರ ಮಗ ಡಿ.ಬಿ. ಹರೀಂದ್ರ ಇಬ್ಬರೂ ಅವರಲ್ಲಿ ಸುಮಾರು ಎಂಟು ವರ್ಷಗಳ ಕಾಲ ಸಂಗೀತ ಕಲಿತೆವು.

ನಾನು ಗುರುಗಳ ಬಳಿ ಸರೋದ್ ಕಲಿಯಲು ಪ್ರಾರಂಭಿಸಿದಾಗ ನನಗೆ ಇಪ್ಪತ್ತು ವರ್ಷವಾಗಿತ್ತು. "ತುಂಬಾ ತಡವಾಯಿತಲ್ಲವೇ?" ಎನ್ನುವುದು ಸಾಮಾನ್ಯವಾಗಿ ಎಲ್ಲರೂ

ಸಂಸ್ಕಾರದ ಚಿತ್ರೀಕರಣದ ಸಂದರ್ಭದಲ್ಲಿ ಗೆಳೆಯರ ಮನೆಯಲ್ಲಿ.



ಕೇಳುವ ಪ್ರಶ್ನೆ. ಒಂದರ್ಥದಲ್ಲಿ ಇದು ನಿಜ, ಇನ್ನೊಂದು ಮಗ್ಗುಲಿನಿಂದ ನೋಡಿದರೆ ಇದು ನಿಜವಲ್ಲ. ನನಗೆ ಬಾಲ್ಯದಿಂದಲೂ ಹಿಂದೂಸ್ತಾನಿ ಸಂಗೀತದಲ್ಲಿ ತರಬೇತಿ ದೊರಕಿತ್ತು – ಮೊದಲು ತಬಲಾವಾದನದಲ್ಲಿ, ನಂತರ ಗಾಯನದಲ್ಲಿ. ನಮ್ಮ ಗುರುಗಳ ಬಳಿಗೆ ಸರೋದ್ ಕಲಿಯಲು ಹೋಗುವ ಹೊತ್ತಿಗೆ ನಾನು ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ಗಾಯನವನ್ನು ಕಲಿತಿದ್ದೆ. ಅದಕ್ಕೂ ತುಂಬಾ ಕಠಿಣವಾದ ಅಭ್ಯಾಸ ಬೇಕಿತ್ತು. ಹಾಗಾಗಿ ನನಗೆ ಸರೋದ್‌ಗೆ ಬೇಕಾದ ಮಾನಸಿಕ ಸಿದ್ಧತೆ ಮೊದಲಿನಿಂದಲೇ ಇತ್ತು. ಆದರೆ ಅದನ್ನು ಉಸ್ತಾದ್ ಅಲಿ ಅಕ್ಬರ್‌ಖಾನ್ ಅವರ ಶೈಲಿಗೆ ಒಗ್ಗಿಸಿಕೊಳ್ಳಬೇಕಿತ್ತು. ಒಂದರ್ಥದಲ್ಲಿ ನನ್ನ ಈ ಗಾಯನದ ಕಲಿಕೆ ಮತ್ತು ಶೈಲಿಯನ್ನು ಸರೋದ್ ವಾದ್ಯಕ್ಕೆ ಹೊಂದುವಂತೆ ಮಾರ್ಪಡಿಸಿಕೊಳ್ಳಬೇಕಿತ್ತು. ಸರೋದ್ ನುಡಿಸಲು ದೈಹಿಕ ದಾರ್ಢ್ಯ ಮತ್ತು ತಾಕತ್ತು ಬೇಕು. ಬೆರಳುಗಳು ಶಕ್ತಿಯುತವಾಗಿರಬೇಕು. ಇದಕ್ಕೆ ನನಗೊಂದು ಅನುಕೂಲವಿತ್ತು. ನಾನು ಎಡಚನಲ್ಲ, ಆದರೂ ನನ್ನ ಎಡಗೈ ಬೆರಳುಗಳು ಫ್ಲೆಕ್ಸಿಬಲ್ ಆಗಿದ್ದವು. ಏಕೆಂದರೆ ನಾನು ತಬಲಾ ಕಲಿಯಲು ಪ್ರಾರಂಭಿಸಿದಾಗ ಅದೆಷ್ಟು ಚಿಕ್ಕವನೆಂದರೆ ನನಗೆ ಎಡ ಬಲ ಇವುಗಳ ವ್ಯತ್ಯಾಸವೇ ತಿಳಿದಿರಲಿಲ್ಲ. ನನ್ನ ತಂದೆ ನನ್ನ ಎದುರು ಕುಳಿತು ನುಡಿಸುತ್ತಿದ್ದರು. ಅವರು ಬಲಗೈನಲ್ಲಿ ಮಾಡಿದ್ದನ್ನು ನಾನು ಎಡಗೈನಲ್ಲಿ ಮಾಡುತ್ತಿದ್ದೆ; ಕನ್ನಡಿಯ ಪ್ರತಿಬಿಂಬ ಇದ್ದ ಹಾಗೆ. ನನಗೆ ಸರೋದ್ ನುಡಿಸಲು ಬೇಕಾದ ಭಂಗಿ ರೂಢಿಯಾಗಿಬಿಟ್ಟಿತ್ತು. ದೈಹಿಕ ದಾರ್ಢ್ಯವನ್ನು ಮಾತ್ರ ಬೆಳೆಸಿಕೊಳ್ಳಬೇಕಿತ್ತು. ಹಾಗಾಗಿ ನಾನು ತುಂಬಾ ತಡವಾಗಿ ಸರೋದ್ ಕಲಿಯಲು ಪ್ರಾರಂಭಿಸಿದರೂ ನನಗೆ ಅಷ್ಟೊಂದು ಕಷ್ಟವೆನಿಸಲಿಲ್ಲ. ಬೆರಳುಗಳನ್ನು ಮಡಿಸುವುದಕ್ಕೆ ಸ್ವಲ್ಪ ತೊಂದರೆಯಾಗುತ್ತಿತ್ತು. ಆದರೆ ಖಾನ್‌ಸಾಹೇಬರು ನನಗೆ ಬೆರಳು ಮಡಿಸುವುದನ್ನೂ ಹೇಳಿಕೊಟ್ಟು ಪಾಠ ಕಲಿಸಿದರು.

## ಖಾನ್‌ಸಾಹೇಬರ ಬೆನ್ನು ಹತ್ತಿ. . .

ಸಿವಿಲ್ ಸರ್ವಿಸ್ ಪರೀಕ್ಷೆ ತೆಗೆದುಕೊಂಡು ನಾನು ಮುಂದುವರೆಯಬೇಕೆಂಬುದು ಮನೆಯವರ ಬಯಕೆಯಾಗಿತ್ತು. ಆದರೆ ನನಗಾದರೋ ಸಿನಿಮಾದಲ್ಲಿ ಹಿನ್ನೆಲೆ ಗಾಯಕನಾಗುವ ಕನಸು! ನನಗೆ ಒಳ್ಳೆಯ ಧ್ವನಿಯಿತ್ತು. ನನ್ನ ಗಾಯನವನ್ನು ಮೆಚ್ಚುವ ಒಂದು ದೊಡ್ಡ ಗುಂಪೇ ಇತ್ತು. ಅವರೆಲ್ಲರೂ ನನ್ನನ್ನು ಬಾಲಪ್ರತಿಭೆ ಎಂದೇ ಭಾವಿಸಿದ್ದರು. ಸುಮಾರು ಹದಿನೈದನೇ ವಯಸ್ಸಿನಲ್ಲಿ ನನ್ನ ಧ್ವನಿ ಒಡೆಯಲು ಆರಂಭವಾಯಿತು. ನನ್ನ ಕೋಗಿಲೆಯ ಧ್ವನಿ ಹೋಗಿ ಕಾಗೆಯ ಧ್ವನಿಯಾಯಿತು.

ಮುಂದೆ ನಾನು ಕಾಲೇಜಿಗೆ ಸೇರಿದ ಮೇಲೆ ಮತ್ತೆ ಹಾಡಲು ಪ್ರಾರಂಭಿಸಿದೆ. ನನಗೆ ಅಷ್ಟುಹೊತ್ತಿಗೆ ಶಾಸ್ತ್ರೀಯ ಸಂಗೀತದ ಬಗ್ಗೆ ಒಂದು ತರಹದ ಬೇಸರ ಬಂದಿತ್ತು. ಆಗ ನಾನು ಹೆಚ್ಚಾಗಿ ಹಿಂದಿ ಸಿನಿಮಾ ಗೀತೆಗಳು, ಗಝಲ್ ಇತ್ಯಾದಿ ಹಾಡುತ್ತಿದ್ದೆ. ಸ್ಪರ್ಧೆಗಳಲ್ಲೆಲ್ಲಾ ಭಾಗವಹಿಸಿ ಬಹುಮಾನ ಪಡೆದುಕೊಳ್ಳುತ್ತಿದ್ದೆ. ಒಮ್ಮೆ ನನ್ನ ಹಾಡನ್ನು ಕೇಳಿದ್ದ ತಲತ್ ಮಹಮೂದ್ ಬಾಂಬೆಗೆ ಬಂದಾಗ ತಮ್ಮನ್ನು ಭೇಟಿ ಮಾಡಲು ಹೇಳಿದ್ದರು, ನನ್ನ ಹಿನ್ನೆಲೆ ಗಾಯಕನ ಕನಸಿಗೆ ಬಹುಶಃ ಇದೂ ಒಂದು ಕಾರಣವಿರಬಹುದು.

ಹತ್ತೊಂಬತ್ತನೇ ವಯಸ್ಸಿನಲ್ಲಿ ರೇಡಿಯೋದಲ್ಲಿ ನನ್ನ ಸಂಗೀತ ಪ್ರಸಾರವಾಗಿತ್ತು. ಅದಕ್ಕೂ ಮೊದಲೇ ನಾನು ಸಂಗೀತ ಕಾರ್ಯಕ್ರಮ ನೀಡುತ್ತಿದ್ದೆ. ಸೆಂಟ್ರಲ್




ನಮಗೆ ಗುರುಗಳು ಎಲ್ಲವನ್ನೂ ತಗೋ ಅಂತ ಕೈಗಿಡಲಿಲ್ಲ. ನಾವು ಹೆಕ್ಕಿಕೊಂಡೆವು.
ಪ್ರತಿಕ್ಷಣ ಗಮನಿಸೋದು, ಇದಕ್ಕೆ ಶಿಷ್ಯ ಸಿದ್ಧನಿರಬೇಕಾಗುತ್ತದೆ.

ಕಾಲೇಜಿನಲ್ಲಿ ಬಿ.ಎ ಆನರ್ಸ್ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ತೆಗೆದುಕೊಂಡೆ. ಕೆಲಸವೂ ದೊರಕಿತು. ಆ ವೇಳೆಗೆ ನಮ್ಮಮ್ಮ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ನಾನು ಕೆಲಸಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಅಮ್ಮ ತೀರಿಕೊಂಡರು. ನಾನು ಸಿತಾರಿನ ಪರಮ ಭಕ್ತನಾಗಿದ್ದೆ. ಪಂಡಿತ್ ರವಿಶಂಕರ್ ಒಂದುಸಲ ಬೆಂಗಳೂರಿಗೆ ಬಂದರು. ಟೌನ್‌ಹಾಲಿನಲ್ಲಿ ಹನ್ನೊಂದು ಜನ ಇದ್ದರು. ಅದೆಷ್ಟು ದಿವ್ಯವಾಗಿ ನುಡಿಸಿಬಿಟ್ಟರು ಎಂದರೆ ನಾನು ಮಂಕಾಗಿಬಿಟ್ಟೆ. ನನ್ನದು ಮೇಲೆ, ಎಲ್ಲೋ ದೂರದಲ್ಲಿ, ಎರಡು ರೂಪಾಯಿನ ಸೀಟು. ಎದುರಿನಲ್ಲಿ ಯಾರೂ ಇಲ್ಲ. ಆಮೇಲೆ ಅವರು ಪದೇ ಪದೇ ಬೆಂಗಳೂರಿಗೆ ಬರ್ತಾ ಇದ್ದರು. ಬೆಂಗಳೂರಿನಲ್ಲಿ ಪಂಡಿತ್ ರವಿಶಂಕರ್ ಕಛೇರಿಯಿದ್ದಾಗೆಲ್ಲಾ ನಾನು ತಪ್ಪದೇ ಹೋಗುತ್ತಿದ್ದೆ. ನಾನಾಗ ಅವರ ಕಟ್ಟಾ ಅಭಿಮಾನಿ. ಅಷ್ಟೇ ಅಲ್ಲ, ಇಂದಿಗೂ ನಾನವರ ಅಭಿಮಾನಿ.